ಅ) ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳ ನಿಸರ್ಗಧಾಮವನ್ನು ಪ್ರಸಿದ್ಧ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳೇನು?

ಆ) ಪಿಲಿಕುಳ ನಿಸರ್ಗಧಾಮಗಳನ್ನು ಪ್ರಸಿದ್ಧ ಪ್ರವಾಸೋದ್ಯಮ ಕೇಂದ್ರ ಹಾಗೂ ಮಕ್ಕಳಿಗೆ ಜ್ಞಾನಾರ್ಜನೆ, ಮನರಂಜನಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು 5 ಕೋಟಿ ರೂ. ಅನುಧಾನ ಕೊಡಲು ಸರ್ಕಾರಕ್ಕೆ ಇರುವ ಕಾರಣವೇನು?

ಇ) ಹಾಗಿಲ್ಲದಿದ್ದಲ್ಲಿ ಈ ಅನುಧಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಜೆ. ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) :

ಅ) ಪ್ರವಾಸೋದ್ಯಮ ನೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳ ನಿಸರ್ಗಧಾಮವನ್ನು 'ಬಿ' ಗುಂಪಿನಲ್ಲಿ ಸೇರಿಸಲಾಗಿದೆ.

ಆ) ಪ್ರವಾಸೋದ್ಯಮ ಇಲಾಖೆಯಿಂದ ಈ ಕಾರ್ಯಕ್ರಮಗಳಿಗೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕೇಂದ್ರ ಮಂಜೂರಾತಿಗಾಗಿರುವ ರಾಜ್ಯ ವಿದ್ಯುತ್ ಯೋಜನೆಗಳ ಸಂಖ್ಯೆ.

671 - ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಕೇಂದ್ರದ ಪರಿಶೀಲನೆಯಲ್ಲಿರುವ ರಾಜ್ಯದ ವಿದ್ಯುತ್ ಯೋಜನೆಗಳ ಸಂಖ್ಯೆ ಎಷ್ಟು, (ವಿವರ ನೀಡುವುದು)

ಆ) ಅವುಗಳಲ್ಲಿ ಎಷ್ಟು ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಮಂಜೂರಾತಿ ನೀಡಿದ್ದಾರೆ ಹಾಗೂ ಉಳಿದ ಯೋಜನೆಗಳಿಗೆ ಮಂಜೂರಾತಿ ನೀಡದಿರಲು ಕಾರಣವೇನು?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) :

ಅ) ಈ ಕೆಳಕಂಡ ನಾಲ್ಕು ವಿದ್ಯುತ್ ಯೋಜನೆಗಳ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿಕೊಡಲಾಗಿದೆ.

1) ಜಲವಿದ್ಯುತ್ ಯೋಜನೆಗಳು :

ಅ) ಶಿವನಸಮುದ್ರಂ ಕಾಲಿಕ ವಿದ್ಯುತ್ ಯೋಜನೆ (270 ಮೆ.ವ್ಯಾ.)

ಆ) ಮಹದಾಯಿ ಜಲವಿದ್ಯುತ್ ಯೋಜನೆ (345 ಮೆ. ವ್ಯಾ.)

2) ಶಾಖೋತ್ಪನ್ನ ವಿದ್ಯುತ್ ಯೋಜನೆ

ಅ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 5 ಮತ್ತು 6ನೇ ಘಟಕ

3) ಬಿಡದಿ ಸಂಯುಕ್ತ ಚಕ್ರೀಯ ವಿದ್ಯುತ್ ಯೋಜನೆ (300 ಮೆ.ವ್ಯಾ.)

ಅ) ರಾಯಚೂರು ಶಾಖೋತ್ಪನ್ನ ಕೇಂದ್ರ 5 ಮತ್ತು 6ನೇ ಘಟಕಗಳ ಸ್ಥಾಪನೆಗೆ ಈಗಾಗಲೇ ಕೇಂದ್ರ ಸರ್ಕಾರದ ತಾಂತ್ರಿಕ ಪಣಕಾಸು ಮಂಜೂರಾತಿ ದೊರೆತಿದೆ. ಉಳಿದ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆಯಬೇಕಾಗಿದೆ. ಶಿವನಸಮುದ್ರಂ ಯೋಜನೆಯು ಕಾವೇರಿ ನದಿಕೊಳ್ಳದಲ್ಲಿರುವುದರಿಂದ ಇದು ಆ ಕಾವೇರಿ ಜಲವಿವಾದದಲ್ಲಿ ಸೇರಿಕೊಂಡಿದೆ.

ಮಹಾದಾಯಿ ಜಲವಿದ್ಯುತ್ ಯೋಜನೆಗೆ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಗೋವಾ ಸರ್ಕಾರದ ಸಮ್ಮತಿಯನ್ನು ಪಡೆದುಕೊಳ್ಳಬೇಕಾಗಿದೆ.

ಬಿಡದಿ ವಿದ್ಯುತ್ ಯೋಜನೆ ಸಾಧ್ಯತಾ ವರದಿಯನ್ನು ದಿನಾಂಕ 27.01.1996ರಲ್ಲಿ ಕೇಂದ್ರೀಯ ವಿದ್ಯುತ್ ಪ್ರಾಧಿಕಾರಕ್ಕೆ ಒಪ್ಪಿಸಲಾಗಿದೆ. ಆದಷ್ಟು ಬೇಗ ಮುಂಜೂರಾತಿ ಪಡೆಯಲು ಕೇಂದ್ರೀಯ ವಿದ್ಯುತ್ ಪ್ರಾಧಿಕಾರದ ದಲವಾರು ಅವಶ್ಯಕತೆಯಗಳನ್ನು ಪೂರೈಸಲು ಕರ್ನಾಟಕ ವಿದ್ಯುತ್ ನಿಗಮವು ಕ್ರಮ ತೆಗೆದುಕೊಳ್ಳುತ್ತಿದೆ.

ಇ) ಶಿವನಸಮುದ್ರಂ ಕಾಲಿಕ ವಿದ್ಯುತ್ ಯೋಜನೆಯನ್ನು ಕಾವೇರಿ ಟ್ರಿಬ್ಯೂನಲನಿಂದ ಹೊರತುಪಡಿಸಿ ಕಾರ್ಯರೂಪಕ್ಕೆ ತರಲು ಯತ್ನಿಸಲಾಗುತ್ತಿದೆ.

ಮಹಾದಾಯಿ ಯೋಜನೆಯಿಂದಾಗುವ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಗೋವಾ ಮತ್ತು ಕರ್ನಾಟಕ ಸರ್ಕಾರದ ಅಧಿಕಾರಿಗಳನ್ನೊಳಗೊಂಡ ಒಂದು ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. ತಾಂತ್ರಿಕ ಸಮಿತಿಯ ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿದ ವಿಷಯ.

ಶ್ರೀನಿವಾಸಪುರದಲ್ಲಿ ನಡೆದಂತ ಘಟನೆ ಕುರಿತು.

+ಶ್ರೀ ವಾಟಾಳ್ ನಾಗರಾಜ್ : ಒಂದು ಪ್ರಶ್ನೆಯನ್ನು ತಮ್ಮ ಮುಂದೆ ತರಬೇಕಾಗಿದೆ. ಆ ಶ್ರೀನಿವಾಸಪುರದಲ್ಲಿ ನಡೆದಿರತಕ್ಕಂಥ ಘಟನೆ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಅದು ತಮ್ಮ ಕ್ಷೇತ್ರವೂ ಕೂಡ, ಮತ್ತು ಇದು ರಾಜ್ಯದ ಸಮಸ್ಯೆಗೂ ಸಂಬಂಧಪಟ್ಟಿರತಕ್ಕಂಥದ್ದು, ಅಲ್ಲಿ ಶಾಂತಿಭಂಗವಾಗಿರತಕ್ಕಂಥದ್ದು, ಅಲ್ಲಿ ಪರಿಸ್ಥಿತಿ ಏನೇನು ನಡೆದಿದೆ ಎಂಬುದರ ಬಗ್ಗೆ ಸ್ವಲ್ಪ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ತಾವು ಈ ವಿಷಯದಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ವೈಯಕ್ತಿಕವಾಗಿ ಕೇಳಿದ್ದೆ.

ಅಧ್ಯಕ್ಷರು : ತಾವು ಕೇಳಿದಿರಿ, ಖರ್ಗೆಯವರೂ ಪ್ರಸ್ತಾಪ ಮಾಡಿದರು, ಶ್ರೀರಾಂರೆಡ್ಡಿಯವರೂ ಕೇಳಿದ್ದಾರೆ, ಯಡಿಯೂರಪ್ಪನವರು ಪತ್ರ ಬರದು ಕಳುಹಿಸಿದ್ದಾರೆ.